ವಿಷಯ:- ಹುಬ್ಬಳ್ಳಿ ಗ್ರಾಮೀಣ ವಿಧಾನಸಭಾಕ್ಷೇತ್ರದ ಗಿರಣಿ ಜಾಗದಲ್ಲಿ ವಾಸವಾಗಿರುವವರಿಗೆ ಹಕ್ಕು ಪತ್ರ.

1371 (874) **ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):-** ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಗಿರಣಿ ಜಾಗದಲ್ಲಿ ಸಾವಿರಾರು ಜನರು ಕಳೆದ 50 ವರ್ಷಕ್ಕೂ ಮೇಲ್ಪಟ್ಟಿನಿಂದ ಮನೆಗಳನ್ನು ಕಟ್ಟಿಕೊಂಡು ವಾಸವಾಗಿದ್ದು ಮತ್ತು ಮಹಾನಗರ ಸಭೆ ತೆರಿಗೆ ತುಂಬುತ್ತ ಬಂದಿದ್ದರೂ ಇಲ್ಲಿಯವರೆಗೆ ಸದರೀಯವರಿಗೆ ಹಕ್ಕು ಪತ್ರಗಳನ್ನು ವಿತರಿಸದೆ ಇರುವುದರಿಂದ ಜನರು ತೊಂದರೆಗೀಡಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹಕ್ಕು ಪತ್ರಗಳನ್ನು ವಿತರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಮಿರಾಜುದ್ದಿನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಈ ಜಮೀನು ಮಹಾದೇವ ಟೆಕ್ಸ್‌ಟೈಲ್ ಮಿಲ್ ಇವರ ಒಡೆತನದಲ್ಲಿರುವುದರಿಂದ ಮಹಾನಗರ ಸಭೆಯ ವತಿಯಿಂದ ಹಕ್ಕು ಪತ್ರಗಳನ್ನು ನೀಡುವ ಸಂದರ್ಭ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ:- ನಗರ ಸಭೆಗಳಿಗೆ ಸದಸ್ಯರ ನಾಮನಿರ್ದೇಶನ.

1374 (2254) **ಡಾ:ಎಂ.ಪಿ. ಕರ್ಕಿ, (ಕುಮಟಾ):-** ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಗರಸಭೆಗಳಿಗೆ ಸರ್ಕಾರವು ಸದಸ್ಯರನ್ನು ನಾಮನಿರ್ದೇಶನ ಮಾಡುವುದರ ಔಚಿತ್ಯವೇನು?

ಆ) ಹಾಗಿದ್ದಲ್ಲಿ ನಾಮ ನಿರ್ದೇಶನ ಮಾಡುವುದನ್ನು ತೆಗೆದು ಹಾಕಲಾಗುವುದೇ?

ಶ್ರೀ ಮಿರಾಜುದ್ದಿನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಮುನ್ಸಿಪಾಲಿಟಿಗಳು ಉತ್ತಮವಾಗಿ ಕೆಲಸ ನಿರ್ವಹಿಸಲು ಪರಿಣಿತಿಯನ್ನು ಒದಗಿಸುವುದಕ್ಕೋಸ್ಕರ.

ಆ) ಇಲ್ಲ.

ವಿಷಯ:- ಹಿಂದುಳಿದ ವರ್ಗದವರಿಗೆ ನೀಡುತ್ತಿರುವ ಸೌಲಭ್ಯಗಳು.

1375 (2256) **ಡಾ: ಎಂ.ಪಿ. ಕರ್ಕಿ (ಕುಮಟಾ):-** ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರದ ವಿವಿಧ ಹಿಂದುಳಿದ ವರ್ಗಗಳಿಗೆ ನೀಡಿರುವ ಸೌಕರ್ಯಗಳನ್ನು ಕೇವಲ ಕೆಲವೇ ವರ್ಗದವರು ಪಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಜಾತಿ ಆಧಾರಿತ ಪ್ರಯತ್ನ ಕೈ ಬಿಟ್ಟು ಬಡತನದ ಆಧಾರದ ಮೇಲೆ ಸೌಲಭ್ಯ

ಒದಗಿಸಲು ಸರ್ಕಾರ ನೀತಿ ಬದಲಿಸುವುದೇ?

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಸಚಿವರು):-

ಅ) ಇಲ್ಲ.

ಆ) ಸರ್ಕಾರಿ ಆದೇಶ ಸಂಖ್ಯೆ ಸಕಇ 150 ಬಿಸಿಎ 94 ದಿನಾಂಕ: 17-9-94ರ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಆರ್ಥಿಕ ಆಧಾರದ ಮೇಲೆ ಹಾಗೂ ಜಾತಿ ಆಧಾರದ ಮೇಲೆ ನೀಡುತ್ತಿದೆ.

ವಿಷಯ:- ಮಂಗಳೂರು ತಾಲ್ಲೂಕಿನಲ್ಲಿ ಕೈಗಾರಿಕಾ ಘಟಕಗಳಿಗೆ ಸರಕಾರದಿಂದ ಕೊಡ-ಲಾಗಿರುವ ಜಮೀನನ್ನು ಕುರಿತು.

1377 (2379) **ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್):-** ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು ತಾಲ್ಲೂಕಿನಲ್ಲಿ ಕೈಗಾರಿಕಾ ಘಟಕ (ಬೃಹತ್)ಗಳಿಗೆ ಸರ್ಕಾರದಿಂದ ಕೊಡ-ಲಾಗಿರುವ ಜಮೀನು ಎಷ್ಟು? (ವಿವರ ಒದಗಿಸುವುದು)

ಆ) ಕೈಗಾರಿಕೆಗಳು ಖಾಸಗಿಯವರಿಂದ ಪಡೆದುಕೊಂಡಿರುವ ಜಮೀನು ಎಷ್ಟು? (ಕಂಪನಿವಾರು ವಿವರ ಒದಗಿಸುವುದು)

ಇ) ಸರ್ಕಾರದ ಜಮೀನನ್ನು ಕಂಪನಿಗಳಿಗೆ ಒದಗಿಸಲು ಸರ್ಕಾರದ ನಿಬಂಧನೆಗಳೇನು? ಹಾಗೂ ಹಾಕಿರುವ ನಿಬಂಧನೆ ಏನು?

ಈ) ಸರ್ಕಾರದ ನಿಬಂಧನೆಗಳನ್ನು ಪಾಲಿಸದೇ ಇದ್ದಲ್ಲಿ ಅಂತಹವರ ವಿರುದ್ಧ ಸರ್ಕಾರದವರು ಕೈ-ಗೊಳ್ಳಲಿರುವ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪ-ನ್ಮೂಲಗಳ ಅಭಿವೃದ್ಧಿ ಸಚಿವರು):-

ಅ) ವಿವರಗಳು ಈ ಕೆಳಗಿನಂತಿವೆ:

ಕ್ರ ಸಂ.	ಘಟಕದ ಹೆಸರು	ಸರ್ಕಾರಿ ಜಮೀನು ಕೊಟ್ಟಿರುವ ವಿಸ್ತೀರ್ಣ (ಎಕರೆ–ಸೆಂಟ್ಸ್)
1.	ಎಂ. ಆರ್. ಪಿ. ಎಲ್.	155-75
2.	ಕುದುರೆಮುಖ ಕಬ್ಬಿಣ ಕಂಪನಿ	2-23